ಅಜ್ಜಿ ಆಯ್ತು ಕೊಡಪ್ಪಾ ಚೀಟಿ ತಾನೆ ಅಂತ ಅದನ್ನ ತಂದು ರಾಜಕುಮಾರಿಗೆ ಹೂ ಪತ್ರೆ ಜತೆ ಇಟ್ಟು ಕೊಟ್ಟುಬಿಟ್ಲು. ಹುಡುಗಿಗೆ ಹೋದ ಪ್ರಾಣ ಬಂತು ಕಣಜ್ಜಿ ಅಂತ ಹೂ ಪತ್ರೇನೂ, ಪತ್ರವನ್ನೂ ಕಣ್ಣಿಗೆ ಒತ್ತಿಕೊಂಡಳು.

ಮೂರು ತಿಂಗಳು ಕಳೆದು, ರುದ್ರಗೊಮಾರ ರಾಜಕುಮಾರಿನ ಲಗ್ನವಾಗುವ ಟೈಮು ಹತ್ತಿರ ಬರುತ್ತಿತ್ತು. ಆಗ ರಾಜಕುಮಾರಿ ರುದ್ರಗೊಮಾರನಿಗೆ ಸ್ವಾಮಿ, ಸ್ವಾಮಿ ನಾಳೆಕೆ ನನ್ನಿ ವ್ರತ ಮುಗಿತದೆ, ಅದಕ್ಕೆ ಒಂದು ಹರಿಕಥೆ ಮಾಡಿಸಬೇಕಲ್ಲ ಅಂತ ಕೇಳಿಕೊಂಡಳು. ರುದ್ರಗೊಮಾರ ಅಯ್ಯೋ ಅದಕ್ಕೇನು ಮೂರು ದಿನದ ಮೇಲೆ ನಾನು ನೀನು ಚಿನ್ನದ ಮಂಚದ ಮೇಲೆ ಮಲಗುವಂಥಾ ಮುಹೂರ್ತ ಬತ್ತಾದೆ ಅಂದ ಮೇಲೆ ಒಬ್ಬ ದಾಸಯ್ಯನ್ನ ಕರೆಸಿ ಕಥೆ ಮಾಡಿಸುವುದು ಯಾವ ಕಷ್ಟ ತಗಾಮತ್ತೆ ಅಂದು ಉದಾಸೀನದ ಮಾತಾಡಿದ. ಆವತ್ತು ಸಾಯಂಕಾಲನೇ ಯಾರಾದರೂ ಅರಮನೆ ಮುಂದೆ ಬಂದು ಹರಿಕಥೆ ಮಾಡಬೇಕು ಅಂತ ಬೀದಿಲೆಲ್ಲ ಸಾರಿಕೆ ಹಾಕಿಸಿಬಿಟ್ಟ.

ಭದ್ರಗೊಮಾರ ಹರಿಕಥೆ ದಾಸನ ಯಾಸ ಹಾಕಿಕೊಂಡು ಅರಮನೆ ಮುಂದೆ ಬಂದ. ಚಿಟುಕುತಾಳ, ತಂಬೂರಿ ಎಲ್ಲ ಹಿಡಕಂಡು ಸ್ವಾಮಿ ನಾನು ದೇಸಾನುದೇಸವೆಲ್ಲ ತಿರುಗಿ ಹರಿಕಥೆ ಮಾಡಂಥವುನು ಅಂದ. ರುದ್ರಗೊಮಾರ ಏನಯ್ಯಾ ನಿನ್ನ ಹೆಸರು ಅಂದದ್ದಕ್ಕೆ, ನನ್ಹೆಸರು ಪೂಜಾರಿ ಹನುಮಯ್ಯ ಅಂತಂದ. ಆಯ್ತು, ನೀನು ಎಷ್ಟು ಬೇಕೋ ಅಷ್ಟು ದ್ರವ್ಯ ತಗಂಡು ನಾಳೆ ಇದೇ ಅರಮನೆ ಮುಂದೆ ಹರಿಕಥೆ ಮಾಡಬೇಕು ನೋಡು, ಅಂತ ಅಪ್ಪಣೆ ಮಾಡಿದ.

ಅದರ ನಾಳೆ ಪೂಜಾರಿ ಹನುಮಯ್ಯನ ಯಾಸದಲ್ಲಿ ಭದ್ರಗೊಮಾರ ಬಂದ. ಅದೇ ಅರಮನೆ ಚದುರಲ್ಲಿ ಚಂದ್ರಶೇಖರ ಮಹಾರಾಜ, ಅವನ ರಾಣಿ, ರುದ್ರಗೊಮಾರ, ರೈತಗೊಮಾರ, ಮಂತ್ರಿ ಪ್ರಧಾನಿ, ಪುರೋಹಿತರು ಎಲ್ಲ ಜಮಾಯಿಸಿರುವರು. ಭದ್ರಗೊಮಾರನು ಹರಿಕಥೆ ಅಂತೇಳಿ ಎಲ್ಲರ ಮುಂದೆ, ತನ್ನ ತಾಯಿ ನೀಲಾವತಿಯು ಪಂಥ ಕಟ್ಟಿದ್ದು, ಗೆದ್ದರೂ ಸೋತವಳಾಗಿ ವನಾಂತರವಾದದ್ದು, ಜಂಗುಮಯ್ಯನ ಗುಡಿಸಲಲ್ಲಿ ಮಗು ಪಡೆದದ್ದು, ರುದ್ರಗೊಮಾರ, ರೈತಗೊಮಾರ ಮೋಸ ಮಾಡಿದ್ದು, ಪಾತಾಳ ಲೋಕದಿಂದ ಬಂದ ರಾಜಕುಮಾರಿ ವ್ರತ ಮಾಡಿದ್ದು, ಅವಳು ತನಗಾಗಿಯೇ ಕಾಯುತ್ತಿರುವುದು ಎಲ್ಲವನ್ನೂ ರಾಗದಲ್ಲಿ ಹಾಡಿದ. ಚಂದ್ರಶೇಖರ ಮಹಾರಾಜನಿಗೆ ಯಲಾ ಇವನು ನನ್ನ ಕಥೆನೆ ಹೇಳ್ತಾವನಲ್ಲಾ, ಇವನು ಹಿರಿ ಹೆಂಡತಿ ಪುತ್ರನೇ ಇರಬೇಕು ಅಂತೇಳಿ ಯಾರಪ್ಪಾ ನೀನು ಅಂತ ಕೇಳಿದ. ಆಗ ಭದ್ರಗೊಮಾರ ತನ್ನ ಹರಿಕಥೆ ದಾಸನ ವೇಷವನ್ನು ತೆಗೆದುಹಾಕಿ ತಂದೇನ ಜಂಗುಮಯ್ಯನ ಆಶ್ರಮದ ಕಡೆಗೆ ಕರಕಂಡು ಬಂದ. ಆಗ ಚಂದ್ರಶೇಖರ ಮಹಾರಾಜನೂ ನೀಲಾವತಿನೂ ಆದದ್ದಾಗೋಯ್ತು, ಹೋದ ಜೀವ ಬಂದಂಗಾಯ್ತಲ್ಲ ಪರಮಾತ್ಮ ಅಂತ ಕೊಳ್ಳಿಗೆ ಕೊಳ್ಳು ತಬ್ಕಂಡು ಕಣ್ಣೀರು ಹಾಕಿದರು. ಚಂದ್ರಶೇಖರ ಮಹಾರಾಜ ಹೆಂಡ್ತೀನೂ ಮಗನನ್ನೂ ಕರಕೊಂಡು ಬಂದು ರಾಜ್ಯದ ಪಟ್ಟನ ಭದ್ರಗೊಮಾರನಿಗೆ ಕಟ್ಟಿ ಪಾತಾಳಲೋಕದ ರಾಜಕುಮಾರಿನ ಅವನಿಗೇ ಲಗ್ನ ಮಾಡಿದ.